ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನಲ್ಲಿ ನೀರಾವರಿಯಿಂದ ವ್ಯವಸಾಯ ಮಾಡಲು ನಾನಾ ರೀತಿಯ ಅಡ್ಡಿ ಆತಂಕಗಳು ಬರುತ್ತಿರುವುದರಿಂದ ಇಲ್ಲಿಗೆ ಹೆಚ್ಚು ವಿದ್ಯುಚ್ಛಕ್ತಿ ಸೌಲಭ್ಯಗಳನ್ನು ಕೊಡಬೇಕೆಂದು ಇದ್ದರೂ ಇಲ್ಲಿನ ಕೆಲಸಗಳು ಅರ್ಧದಲ್ಲಿ ಹಾಗೇ ನಿಂತಿವೆ. ಈಗ ಆದರೂ ಇದನ್ನು ತ್ವರಿತವಾಗಿ ಮುಗಿಸಿಕೊಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಮಾಗಡಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಒದಗಿಸುವುದರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕೆಲಸ ನಡೆದಿದೆ. 80 ಕಿಲೋಮೀಟರಿನ ಲೈನನ್ನು ಹೊಸದಾಗಿ ಹಾಕಲು ಅದರ ಎಸ್ಟಿಮೇಟು ಕೂಡ ಈಗ ಮಂಜೂರಾಗಿದೆ. ಮಾಗಡಿ ತಾಲ್ಲೂಕಿನಲ್ಲಿ ತಾವರೇಕೆರೆ ಹೋಬಳಿಯಲ್ಲಿ ಮೂರೂವರೆ ಮೈಲಿಗಳ ಅಂತರದಲ್ಲಿ ಕೆಲವು ಗ್ರಾಮಗಳ ರೈತರು ಐ. ಪಿ. ಸೆಟ್ಟುಗಳನ್ನು ಖರೀದಿ ಮಾಡಿದ್ದಾರೆ. ಲೈನು ಹಾಕುವ ಕೆಲಸಗಳಿಗಾಗಿ ಬೇಕಾದ ಎಲ್ಲ ಮೆಟೀರಿಯಲ್ಸ್ ಒದಗಿಸಿರಾಗಿದೆ. ಇನ್ನೊಂದು ಲೈನು ಮಾಗಡಿಯಿಂದ ಕುಣಿಗಲ್ ತಾಲ್ಲೂಕ್ ಅಂಕನಹಳ್ಳಿಯವರೆಗೆ ಸುಮಾರು ಹತ್ತು ಮೈಲಿಗಳ ಲೈನನ್ನು ಹಾಕುವ ಕೆಲಸಗಳು ನಡೆಯುತ್ತಿವೆ. ಆದುದರಿಂದ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಮಾಗಡಿ ತಾಲ್ಲೂಕಿನಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುತ್‌ಶಕ್ತಿ ಒದಗಿಸುವ ಕೆಲಸ ಭರದಿಂದ ನಡೆಯುತ್ತಿವೆ.

---

## RECOGNITION TO THE MUSLIM NATIONAL HIGH SCHOOL AT CHICKMAGALUR

*Q.—214. SMT. B. L. SUBBAMMA (Chickmagalur) .—

Will the Government be pleased to state :—

(*a*) whether the Muslim National High School at Chickmagalur has been recognised by the Government ;

(*b*) whether they have received any complaint regarding its improper administration ;

(*c*) whether they would get a report with regard to the miserable condition of the students studying there ?

*A*.—SRI S. R. KANTHI (Minister for Education) .—

(*a*) Recognition on temporary basis has been granted for the years 1962-63, 1963–64, 1964–65 and 1965–66.

(*b*) Complaints have been received by the Director of Public Instruction, Bangalore.

(*c*) Yes.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಉತ್ತರದಲ್ಲಿ ನಾಲ್ಕು ವರ್ಷಗಳಿಗೆ ತಾತ್ಕಾಲಿಕ ಆಧಾರದ ಮೇಲೆ ಮನ್ನಣೆಯನ್ನು ನೀಡಲಾಗಿದೆ ಎಂದು ಹೇಳಿದ್ದೀರಿ. ಈ ರಾಷ್ಟ್ರೀಯ ಪ್ರೌಢಶಾಲೆಗೆ ಕೊಟ್ಟಿರ ತಕ್ಕ ಅನುಮತಿಯಂತೆ ಇತರ ಸ್ಕೂಲುಗಳಿಗೂ ಅಪ್ಪಣೆ ಕೊಡುತ್ತೀರಾ ?

†ಶ್ರೀ ಎಸ್. ಆರ್. ಕಂಠಿ.—ವರ್ಷ್‌ಕ್ ವರ್ಷ್ ಎಲ್ಲ ಕಡೆಗೂ ಹೇಗೆ ಅಪ್ಪಣೆ ಕೊಡುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇಲ್ಲಿರುವ ಆಡಳಿತದ ಬಗ್ಗೆ ಸರಕಾರಕ್ಕೆ ದೂರುಗಳು ಬಂದಿವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಸರಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ?

ಶ್ರೀ ಎಸ್. ಆರ್. ಕಂಠಿ.—ಯಾವ ದೂರುಗಳು ಬಂದಿವೆ ಎಂದು ಹೇಳಿದ್ದಾರೋ ಅದನ್ನು ಸರಿಪಡಿಸಬೇಕೆಂದು ಇಲ್ಲಿನ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇಲ್ಲಿರುವ ಶಾಲೆ ಸರಿಯಾಗಿ ನಡೆಯದೇ ಇರುವುದರಿಂದ ಇದನ್ನು ಮಲೆನಾಡು ಎಜುಕೇಷನಲ್ ಸೊಸೈಟಿಯವರು ನಡೆಸಲು ಒಪ್ಪಿದರೆ ಅವರಿಗೆ ಸರಕಾರ ಕೊಡಲು ಸಿದ್ಧರಾಗಿದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಅಡಳಿತ ಕೊಡುವುದಕ್ಕೆ ಆಗುವುದಿಲ್ಲ. ಆದರೆ ಅಲ್ಲಿರುವ ಮಕ್ಕಳು ಬೇರೆ ಕಡೆ ಹೋಗುವುದಕ್ಕೆ ಒಪ್ಪಿದರೆ ಅವರು ಬೇಕಾದರೆ ಹೊರಗಡೆ ಹೋಗಬಹುದು.